MAY 07, 2026

# AKASHAVANI - DHARWAD

# PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ರಾಜಧಾನಿ ಬೆಂಗಳೂರಿನಿಂದ ತುಮಕೂರು, ದಾವಣಗೆರೆ, ಹಾವೇರಿ, ಹುಬ್ಬಳ್ಳಿ–ಧಾರವಾಡ ಮತ್ತು ಬೆಳಗಾವಿ ಮೂಲಕ, ಮುಂಬೈಗೆ ತೆರಳಲು, ಬೆಂಗಳೂರು–ಮುಂಬೈ, ಸೂಪರ್ ಫಾಸ್ಟ್ ರೈಲನ್ನು, ಜೂನ್ ಅಂತ್ಯದೊಳಗೆ ಆರಂಭಿಸುವುದಾಗಿ, ರೇಲ್ವೆ ಖಾತೆ ಸಚಿವ, ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

<><><>

ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ ಅವರು ಸಲ್ಲಿಸಿದ, ಬೆಂಗಳೂರು–ಮುಂಬೈ ನಡುವಿನ, ಸೂಪರ್ ಫಾಸ್ಟ್ ರೈಲನ್ನು, ವಂದೇ ಭಾರತ್ ಸ್ಲೀಪರ್ ರೈಲಾಗಿ ಬದಲಾಯಿಸಬೇಕೆಂಬ ಮನವಿಯನ್ನು ಸಹ ಪುರಸ್ಕರಿಸಿದ್ದಾರೆ.

<><><>

ಶ್ರೀ ಸಿದ್ಧಾರೂಢ ಸ್ವಾಮೀಜಿ, ಹುಬ್ಬಳ್ಳಿ ರೈಲು ನಿಲ್ದಾಣದ, ಪುನರ್ ಅಭಿವೃದ್ಧಿ ಮತ್ತು ಅತ್ಯಾಧುನಿಕ ಸೌಕರ್ಯಗಳನ್ನು ಕಲ್ಪಿಸುವ ಕುರಿತು, ಬೆಳಗಾವಿ ಸಂಸದ ಜಗದೀಶ ಶೆಟ್ಟರ್ ಅವರ ಮನವಿ ಹಾಗೂ ಅವರ ಪ್ರಸ್ತಾವ, ಲೋಕಾಪುರ, ಸವದತ್ತಿ, ಧಾರವಾಡ ರೇಲ್ವೆಲೈನ್ ಪುನರ್ ಸಮೀಕ್ಷೆ ಬಗ್ಗೆ, ಕೇಂದ್ರ ರೇಲ್ವೆ ಸಚಿವರು, ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ.

<><><>

ಕರ್ನಾಟಕ ಲೋಕಸೇವಾ ಆಯೋಗ ಸುಧಾರಣೆ, ಸದನ ಸಮಿತಿ ಸದಸ್ಯರಾಗಿ, ಹುಬ್ಬಳ್ಳಿ ಸೆಂಟ್ರಲ್ ಕ್ಷೇತ್ರದ ಶಾಸಕ, ಮಹೇಶ ಟೆಂಗಿನಕಾಯಿ ನೇಮಕಗೊಂಡಿದ್ದಾರೆ. ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಈ ಆದೇಶ ಹೊರಡಿಸಿದ್ದಾರೆ.

<><><>

ಆರೈಕೆಯ ಅಗತ್ಯವಿರುವ, ವಯೋವೃದ್ಧರು ಹಾಗೂ ದೀರ್ಘಕಾಲಿಕ ಆರೋಗ್ಯಾಕಾಂಕ್ಷಿಗಳಿಗೆ, ಸಹಕಾರಿಯಾಗಿ, ಮನೆಯವರಿಗೆ ಉಪಶಮನ ಆರೈಕೆ ಕೌಶಲಗಳ ತರಬೇತಿ ಶಿಬಿರವನ್ನು, ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ಸಾಮಾಜಿಕೋದ್ಯಮಿ, ಡಾಕ್ಟರ್ ಜಿತೇಂದ್ರ ಮಜೇಥಿಯಾ ಸಾರಥ್ಯದ, ಮಜೇಥಿಯಾ ಫೌಂಡೇಷನ್, ಆಯೋಜಿಸಿದೆ. 'ಮನೆ ಮನೆಯಲ್ಲಿ ಆರೈಕೆದಾರ', ಧ್ಯೇಯದೊಂದಿಗೆ, ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ, ರಾಷ್ಟ್ರೀಯ ಆರೋಗ್ಯ ಮಿಷನ್ ಅಡಿ, 'ಮನೆ ಮನೆಯಲ್ಲಿ ಜೀವ ಸೇವಕರಿ'ಗಾಗಿ, ಸೂಕ್ತ ತರಬೇತಿಯನ್ನು, ಮಜೇಥಿಯಾ ಫೌಂಡೇಷನ್, ನೀಡಲಿದೆ.

<><><>

ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಹಿರಿಯ ಶಸ್ತ್ರಚಿಕಿತ್ಸಾ ತಜ್ಞ ಹಾಗೂ ಮಜೇಥಿಯಾ ಹಾಸ್ಪೈಸ್ ವೈದ್ಯಕೀಯ ಅಧೀಕ್ಷಕ, ಹುಬ್ಬಳ್ಳಿಯ ಡಾಕ್ಟರ್ ನಾಗರಾಜರಾವ ಸಾನು.

<><><>

ಡಾ. ನಾಗರಾಜರಾವ ಸಾನು ಧ್ವನಿ 40 ಸೆಕೆಂದುಗಳು

<><><>

ಪ್ರಸಾರ ಭಾರತಿಯ, ನಿಕಟಪೂರ್ವ ಸಿ.ಇ.ಓ. ಶಶಿಶೇಖರ್ ವೆಂಪತಿ, ಮೂರು ವ ’ಗಳ ಅವಧಿಗೆ, ಕೇಂದ್ರ ಚಲನಚಿತ್ರ ಪ್ರಮಾಣೀಕರಣ ಮಂಡಳಿಯ, ಹೊಸ ಅಧ್ಯಕ್ಷರಾಗಿ, ನೇಮಕಗೊಂಡಿದ್ದಾರೆ.

<><><>

ಜೂನ್ 8, 1936ರಲ್ಲಿ, ಭಾರತೀಯ ರಾಷ್ಟ್ರೀಯ ಪ್ರಸಾರ ಸೇವೆ, *ಇಂಡಿಯನ್ ಬ್ರಾಡ್‌ಕಾಸ್ಟಿಂಗ್ ಕಾರ್ಪೋರೇಷನ್,* ಆಲ್ ಇಂಡಿಯಾ ರೇಡಿಯೋ, AIR ಎಂದು ಮರುನಾಮಕರಣದೊಂದಿಗೆ, ಕಾರ್ಯಾರಂಭಿಸಿತು.

<><><>

‘ಬಹುಜನ ಹಿತಾಯ; ಬಹುಜನ ಸುಖಾಯ’ ಧ್ಯೇಯದೊಂದಿಗೆ, ಭಾರತೀಯ ಪ್ರಸಾರ ಸೇವೆ ಆರಂಭಗೊಂಡ, ಸುವರ್ಣ ಘಳಿಗೆಯ, 90ನೇ ವರ್ಷಾಚರಣೆ ನಿಮಿತ್ತ, ಆಕಾಶವಾಣಿ ಧಾರವಾಡ ಕೇಂದ್ರ, ನಾಳೆ ಮೇ 8ನೇ ತಾರೀಖು, ಶುಕ್ರವಾರ ಬೆಳಗ್ಗೆ 7.30ಕ್ಕೆ, ತನ್ನ ಆತ್ಮೀಯ ಶ್ರೋತೃಗಳೊಂದಿಗೆ, ವಾಕಥಾನ್ ಆಯೋಜಿಸಿದೆ. ಆಕಾಶವಾಣಿ ಧಾರವಾಡ ಕೇಂದ್ರದ, ಅಭಿಯಾಂತ್ರಿಕ ವಿಭಾಗದ ಉಪ ಮಹಾನಿರ್ದೇಶಕ, ಅರುಣ ಪ್ರಭಾಕರ ಹಾಗೂ ಕಾರ್ಯಕ್ರಮ ವಿಭಾಗದ ಮುಖ್ಯಸ್ಥರಾದ, ಮಂಜುಳಾ ಪುರಾಣಿಕ, ಆಕಾಶವಾಣಿ ಧಾರವಾಡ ಕೇಂದ್ರದ ಆವರಣದಲ್ಲಿ, *‘ಆಕಾಶವಾಣಿ @90 ವಾಕಥಾನ್’* ಗೆ ಚಾಲನೆ ನೀಡಲಿದ್ದಾರೆ.

<><><>

ನಗರ ಪ್ರದೇಶದ, ಸಂಚಾರ ವ್ಯವಸ್ಥೆಯ ಮೇಲೆ ಕೇಂದ್ರೀಕರಿಸಿದ, ಜೀವನ ಸುಗಮತೆ’ ವಿ ’ಯದ ಕುರಿತು, ಬೆಂಗಳೂರಿನಲ್ಲಿ ಆಯೋಜಿತ, 5ನೇ *ಬ್ರಿಕ್ಸ್ ಸಾಯ್* ನಾಯಕರ ಶೃಂಗಸಭೆ, ಇಂದು ಸಮಾರೋಪಗೊಳ್ಳಲಿದೆ. ವಿವಿಧ ದೇಶಗಳಿಂದ ಪಾಲ್ಗೊಂಡಿರುವ ಪ್ರತಿನಿಧಿಗಳು, ಇಂದು, ಭಾರತೀಯ ವಿಜ್ಞಾನ ಸಂಸ್ಥೆಗೆ ಭೇಟಿ ನೀಡಲಿದ್ದಾರೆ.

<><><>

ಆಪರೇ ’ನ್ ಸಿಂಧೂರ್, ಭಯೋತ್ಪಾದನೆಯ ವಿರುದ್ಧ, ಭಾರತದ ದೃಢ ಪ್ರತಿಕ್ರಿಯೆ ಮತ್ತು ರಾಷ್ಟ್ರೀಯ ಭದ್ರತೆಯನ್ನು ಕಾಪಾಡುವಲ್ಲಿ, ಅಚಲ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ ಎಂದು, ಪ್ರಧಾನಮಂತ್ರಿ ನರೇಂದ್ರ ಮೋದಿ, ತಿಳಿಸಿದ್ದಾರೆ. ಪಹಲ್ಗಾಮ್‌ನಲ್ಲಿ, ಮುಗ್ಧ ಭಾರತೀಯರ ಮೇಲೆ ದಾಳಿ ಮಾಡಿದವರಿಗೆ, ಭಾರತೀಯ ಸಶಸ್ತ್ರ ಪಡೆಗಳ ವೃತ್ತಿಪರತೆ, ಸನ್ನದ್ಧತೆ ಮತ್ತು ಸಂಘಟಿತ ಶಕ್ತಿಯನ್ನು, ಎತ್ತಿ ತೋರಿಸಿದ, ರಾಷ್ಟ್ರೀಯ ಭದ್ರತಾ ಪಡೆಗಳನ್ನು, ದೇಶ ವಂದಿಸುತ್ತದೆ ಎಂದರು.

<><><>

International Association of, Athletics Federations, ಈಗ ಮರು ನಾಮಕರಣಗೊಂಡ, ವಿಶ್ವ ಅಥ್ಲೆಟಿಕ್ಸ್ ಸಂಸ್ಥೆ, 1996ರಲ್ಲಿ ಪ್ರಾರಂಭಿಸಿದ, ವಿಶ್ವ ಅಥ್ಲೆಟಿಕ್ಸ್ ದಿನಾಚರಣೆ, ಇಂದು. ವಿಶ್ವಾದ್ಯಂತ ಶಾಲೆಗಳು ಮತ್ತು ಸಮುದಾಯಗಳಲ್ಲಿ, ಫಿಟ್‌ನೆಸ್, ಆರೋಗ್ಯ ಮತ್ತು ಅಥ್ಲೆಟಿಕ್ಸ್‌ನಲ್ಲಿ ಯುವಜನರ ಭಾಗವಹಿಸುವಿಕೆಯನ್ನು, ಉತ್ತೇಜಿಸಲು, ಈ ದಿನ ಮೀಸಲಾಗಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.